ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 4, September-October 2022, Pp. 74- 83
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕನ್ನಡ ಸಾಹಿತ್ಯ ಸಂಗಮದಲ್ಲಿ ಬೌದ್ಧ-ಜೈನಧರ್ಮಗಳು

**ಡಾ. ಗೋವಿಂದರಾಜು ಎನ್***

*ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ಬೂರು, ತುಮಕೂರು ಜಿಲ್ಲೆ

***Abstract:***

*ಕನ್ನಡ ಸಾಹಿತ್ಯದ ಉದಯದ ಬೇರು ಧರ್ಮವಾಗಿದೆ. ಕನ್ನಡ ಸಾಹಿತ್ಯವು ಧರ್ಮದಿಂದಲೇ ಅಂಕುರಿಸಿದೆ. ಹಿಂದಿನಿಂದ ಇಂದಿನವರೆಗೂ ಒಂದಲ್ಲ, ಒಂದು ಬಗೆಯಲ್ಲಿ ಧರ್ಮಕ್ಕೆ ಬದ್ಧವಾಗಿ ಪ್ರಚಾರ ಕಾರ್ಯಕ್ಕೆ ಸಿದ್ಧವಾಗಿ, ಸಮೃದ್ಧ ಸಾಹಿತ್ಯ ಕೃಷಿ ಕನ್ನಡ ನೆಲದಲ್ಲಿ ಬೆಳೆದು ಬಂದಿದೆ. ಮಹಾಭಾರತದ ನೀತಿ ಸಂಹಿತೆಯಂತೆ 'ಎಲ್ಲರೂ ನಡೆದಂತೆ ನೀ ನಡೆ, ನೀ ನಡೆದಂತೆ ಎಲ್ಲರೂ ನಡೆಯುವರು' ನೀತಿ ಕನ್ನಡ ಸಾಹಿತ್ಯದ ಪ್ರತಿರೂಪವಾಗಿದೆ. ಧರ್ಮವು ಮಾನವೀಯ ಸ್ಪರ್ಶದ ಬದುಕಿನ ಎಲ್ಲಾ ಸಾಧ್ಯತೆಗಳನ್ನು ಒಳಗೊಳ್ಳುವ ಸುಮಧುರ ಭಂಡಾರವಾಗಿದೆ. ಧರ್ಮವೆಂದರೆ ಸರ್ವರನ್ನು ಒಳಗೊಳ್ಳುವ ಮಾನವೀಯ ಮೌಲ್ಯಗಳನ್ನು ಪಡೆದ ಸದ್ಗುಣಗಳ ಸಂವಹನ ಸಾಮರ್ಥ್ಯವುಳ್ಳ ಒಂದು ಶಕ್ತಿಯಾಗಿದೆ. ಮಾನವನ ಸರ್ವತೋಮುಖ ಪ್ರಗತಿಯೇ ಧರ್ಮದ ನಿಜವಾದ ಆತ್ಮಸಾಕ್ಷಿ. ಜಗತ್ತಿನ ಎಲ್ಲ ಧರ್ಮಗಳು ಮಾನವ ಧರ್ಮವನ್ನೆ ತಮ್ಮ ಅಂತಃಕರಣವಾಗಿಸಿಕೊಂಡಿವೆ. ಇಂತಹ ಧರ್ಮವು ನಮ್ಮ ನಾಡಿನ ಪ್ರತಿಯೊಬ್ಬ ಕವಿಯ ಅಂತಃಶಕ್ತಿಯಾಗಿದೆ. 'ನರನನ್ನು ನಾರಾಯಣನನ್ನಾಗಿ ಮಾಡಿ, ಮಾನವನನ್ನು ಮಹಾದೇವನನ್ನಾಗಿ, ಅನರ್ಹರನ್ನು ಅರ್ಹಂತನನ್ನಾಗಿ ಮಾರ್ಪಡಿಸುವ ಅದ್ವಿತೀಯ ಶಕ್ತಿಯಾಗಿದೆ.' ಹೀಗಾಗಿ ಮಾನವನ ಸರ್ವತೋಮುಖ ಪ್ರಗತಿಗೆ ಧರ್ಮವು ಅನಿವಾರ್ಯವಾಗಿದೆ. ಹಾಗೆಯೇ ಧರ್ಮ ಪ್ರಚಾರಕ್ಕೆ ಸಾಹಿತ್ಯ ಅತ್ಯುತ್ತಮ ಸಾಧನವಾಗಿದೆ. ಒಟ್ಟಿನಲ್ಲಿ ಧರ್ಮ ಪ್ರಚಾರದ ಜೊತೆ ಜೊತೆಯಲ್ಲಿಯೇ ಸಾಹಿತ್ಯ ಪ್ರಚಾರವು ಮೇಳೈಸಿಕೊಂಡಿದೆ.*

**Keywords:** *ಮತ-ಧರ್ಮ, ಬೌದ್ಧ, ಜೈನ, ಕನ್ನಡ ಕಾವ್ಯ, ಸಾಹಿತ್ಯ.*

## ಪೀಠಿಕೆ

"ಮತ ಇಲ್ಲವೆ ಧರ್ಮ ಇದನ್ನು ಕಾವ್ಯ ಧರ್ಮದೊಡನೆ ಮೇಳವಿಸುವ, ಅಂದರೆ ಅವೆರಡಕ್ಕೂ ಅಷ್ಟೇ ಬೆಲೆ ಕೊಡುವ ದೃಷ್ಟಿ. ಇದು ಇತರ ಭಾರತೀಯ ಸಾಹಿತ್ಯದಂತೆ ಕನ್ನಡ ಸಾಹಿತ್ಯದಲ್ಲಿಯೂ ಪ್ರಚುರವಾಗಿದೆ ಎನ್ನಲು ಅಡ್ಡಿಯಿಲ್ಲ"[1] ಎಂದು ವಿದ್ವಾಂಸರು ಕನ್ನಡ ಕಾವ್ಯ ಮತ್ತು ಧರ್ಮದ ಸಮ್ಮಿಲನದ ಕುರಿತು ಹೇಳಿದ್ದಾರೆ. ಹಾಗಾದರೆ ಧರ್ಮವೆಂದರೇನು? ಎಂಬ ಪ್ರಶ್ನೆಗೆ ಹಲವು ವ್ಯಾಖ್ಯಾನಗಳನ್ನು ಕಾಣಬಹುದು. ಸಾಹಿತ್ಯದ ದೃಷ್ಟಿಯಿಂದ ನೋಡಿದಾಗ ಧರ್ಮವೆಂದರೆ 'ಮಾನವೀಯ ಮೌಲ್ಯಗಳ ಗಣಿ' ಎಂದು ಸರಳವಾಗಿ ಅರ್ಥೈಸಬಹುದು. ಮಾನವನ ಬದುಕಿಗೆ ಮೌಲ್ಯಗಳು ಅತ್ಯವಶ್ಯಕವಾಗಿವೆ. ಮೌಲ್ಯಗಳಿಲ್ಲದ ಮಾನವನ ಬದುಕು ಶೂನ್ಯಕ್ಕೆ ಸಮಾನವೆಂದು ನಮ್ಮ ಹಿರಿಯರು ಭಾವಿಸಿದ್ದಾರೆ. ಹಣ, ಆರೋಗ್ಯ, ಆಸ್ತಿ ಮೊದಲಾದವುಗಳು ಇಲ್ಲದಿದ್ದರೂ ಬದುಕಬಹುದು, ಆದರೆ ಮೌಲ್ಯವಿಲ್ಲದ ಬಾಳು ಸ್ಮಶಾನಕ್ಕೆ ಸಮಾನವೆಂದು ತಿಳಿಯಲಾಗಿದೆ. ಇದೇ ಧರ್ಮ. ಹನ್ನೆರಡನೆ ಶತಮಾನದ ಶರಣ ಸಮುದಾಯದ ಕ್ರಾಂತಿ ಪುರುಷ ಬಸವಣ್ಣ ಹೇಳುವಂತೆ:

***"ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ***

***Please cite this article as:*** ಗೋವಿಂದರಾಜು ಎನ್. (2022). ಕನ್ನಡ ಸಾಹಿತ್ಯ ಸಂಗಮದಲ್ಲಿ ಬೌದ್ಧ-ಜೈನಧರ್ಮಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 1(4), 74–83.

*ಮೃದುವಚನವೇ ಜಪಂಗಳಯ್ಯ*
*ಮೃದು ವಚನಗಳೆ ತಪಂಗಳಯ್ಯ*
*ಸದುವಿನಯವೇ ಸದಾಶಿವನೊಲುಮೆಯಯ್ಯ*
*ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ"*[2]

ಎನ್ನುವ ಮೂಲಕ ಮಾನವೀಯತೆ ತುಂಬಿದ ಮೌಲ್ಯಗಳೆ ಜನಜೀವನದ ಬಹುಮುಖ್ಯ ಭಾಗವೆಂದು ತಿಳಿ ಹೇಳಿದ್ದಾರೆ. ಈ ವಿನಯ ಮತ್ತು ಮೌಲ್ಯಗಳ ಒಟ್ಟಾರೆ ಸಾರವೇ ಧರ್ಮ ಎಂಬುದನ್ನು ಸಾಹಿತ್ಯ ತಿಳಿಸುತ್ತದೆ. ಇಂತಹ ಧರ್ಮವು ನಮ್ಮ ಕವಿಪುಂಗವರಿಗೆ ಅವರ ಕಾವ್ಯ ರಚನೆಗೆ ಮಾತ್ರ ಸೀಮಿತವಾಗದೆ ಬದುಕಿನ ಒಟ್ಟಂದವನ್ನು ರೂಪಿಸುವ ಚಾಲಕ ಶಕ್ತಿಯಾಗಿತ್ತು. ಧಾರ್ಮಿಕ ಕ್ರಿಯೆಗಳಿಲ್ಲದೆ ಅವರ ಬರವಣಿಗೆ ಮುಂದಡಿಯಿಡುವುದು ಕೂಡ ಸುಲಭವಿರಲಿಲ್ಲ. ರಾಜ ಪ್ರಭುತ್ವವೇ ಕವಿಗಳು ಅನುಸರಿಸಬೇಕಾದ ಧರ್ಮವನ್ನು ನಿರ್ಣಯಿಸುತ್ತಿತ್ತು. ಈ ನಿಯಮ ನಮ್ಮ ಭಾರತೀಯ ಪರಂಪರೆಯ ಎಲ್ಲ ಸಾಹಿತಿಗಳ ಮನೋಧರ್ಮವಾಗಿತ್ತೆಂಬುದು ತಿಳಿಯುತ್ತದೆ. ಇದಕ್ಕೆ ಕನ್ನಡ ಕವಿಗಳು ಹೊರತಾಗಿಲ್ಲ. ಕಾವ್ಯದ ವಿಷಯ, ವಸ್ತು, ರಸನಿಷ್ಪತ್ತಿ, ನೀತಿಬೋಧೆ ಮೊದಲಾದ ವಿಚಾರಗಳಲ್ಲಿ ನಮ್ಮ ಕವಿಗಳು ತಾವು ನಂಬಿದ ಧರ್ಮದ ಸಂಗತಿಗಳನ್ನೇ ಪ್ರತಿಪಾದಿಸಿದ್ದಾರೆ ಮತ್ತು ಪ್ರಚಾರಪಡಿಸಿದ್ದಾರೆ. ಕನ್ನಡ ಸಾಹಿತ್ಯದ ಮೇಲೆ ಬೌದ್ಧಧರ್ಮ, ಜೈನಮತ, ವೈಷ್ಣವಧರ್ಮ, ಕ್ರೈಸ್ತಮತ, ಅನುಭಾವಿಕ ಪಂಥಗಳು ಮತ್ತು ಇತರ ಮತ ಪಂಗಡಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರಭಾವ ಬೀರಿರುವುದು ವೇದ್ಯವಾಗುತ್ತದೆ.

ಒಟ್ಟಿನಲ್ಲಿ "ಸಮೃದ್ಧವಾಗಿ ಬೆಳೆದಿರುವ ಕನ್ನಡ ಸಾಹಿತ್ಯದ ಪ್ರಮುಖ ಪ್ರೇರಣೆಗಳು ಯಾವುವು ಎಂದು ವಿಚಾರ ಮಾಡಿದರೆ, ಅವುಗಳನ್ನು ಮುಖ್ಯವಾಗಿ ಮೂರು ಎಂದು ಲೆಕ್ಕ ಹಾಕಬಹುದು. ಒಂದು ನಮ್ಮ ಕವಿಗಳು ಹುಟ್ಟಿ ಬೆಳೆದ ಪರಿಸರದಲ್ಲಿರುವ ಮತ್ತು ನಮ್ಮ ಕವಿಗಳು ಶ್ರದ್ಧೆಯಿಂದ ಒಪ್ಪಿಕೊಂಡ ಪ್ರಮುಖವಾದ ಮತ ಧರ್ಮಗಳು. ಎರಡು, ಕವಿಗಳಿಗೆ ಉದ್ದಕ್ಕೂ ಆಶ್ರಯ ಹಾಗೂ ಪ್ರೋತ್ಸಾಹವನ್ನು ಒದಗಿಸಿದ ರಾಜಾಸ್ಥಾನಗಳು. ಮೂರು, ನಮ್ಮ ಕವಿಗಳಿಗೆ ಸಾಹಿತ್ಯದ ಆರಂಭ ಕಾಲದಿಂದಲೂ ಹಿನ್ನೆಲೆಯಾಗಿದ್ದುಕೊಂಡು, ಅವರ ಕೃತಿಗಳ ವಸ್ತು ಹಾಗೂ ಭಾಷೆಯ ಮೇಲೆ ಪ್ರಬಲ ಪ್ರಭಾವವನ್ನು ಬೀರುತ್ತ ಬಂದ ಸಂಸ್ಕೃತ ಸಾಹಿತ್ಯ ಪರಂಪರೆ. ಈ ಮೂರು ಕನ್ನಡ ಕವಿಗಳಿಗೆ ಒಂದು ರೀತಿಯಿಂದ ಪ್ರೇರಣೆಗಳಾಗಿದ್ದರೂ, ಇನ್ನೊಂದು ರೀತಿಯಲ್ಲಿ ಒಂದು ಬಗೆಯ ಆತಂಕ ಹಾಗೂ ಸವಾಲುಗಳಾಗಿಯೂ ಪರಿಣಮಿಸಿದವೆಂಬುದು ಮರೆಯುವಂತಿಲ್ಲ. ನಮ್ಮ ಕವಿಗಳು ಈ ಮೂರು ಬಗೆಗೆ ಉದ್ದಕ್ಕೂ ತೋರಿದ ಕ್ರಿಯೆ–ಪ್ರತಿಕ್ರಿಯೆಗಳೆ ಕನ್ನಡ ಸಾಹಿತ್ಯ ಚರಿತ್ರೆ ಎನ್ನಬಹುದು"[3] ಎಂಬ ಮಾತುಗಳು ಮಹತ್ವದವು. ಈ ಹಿನ್ನೆಲೆಯ ಅಭಿಪ್ರಾಯಕ್ಕೆ ಪೂರಕವಾಗಿ ಕನ್ನಡ ಸಾಹಿತ್ಯ ಮತ್ತು ಬೌದ್ಧ–ಜೈನ ಮತಗಳ ಅವಿನಾಭಾವ ಸಂಬಂಧವನ್ನು ಪರಿಶೀಲಿಸಬಹುದು.

ಸಾಹಿತ್ಯ ಮತ್ತು ಧರ್ಮವನ್ನು ಅವಲೋಕಿಸುವ ಮೊದಲು, ನಮ್ಮ ಒಟ್ಟಾರೆ ಸಾಹಿತ್ಯವನ್ನು ವಿಭಾಗಿಸಿಕೊಳ್ಳುವುದು ಅತ್ಯವಶ್ಯಕ. ನಮ್ಮ ಕವಿಗಳು ರೂಪಿಸಿದ ಸಾಹಿತ್ಯವು ಧರ್ಮದ ನೆರಳಿನಲ್ಲಿಯೆ ಉಸಿರಾಡಿದೆ. ಹೀಗಾಗಿ ನಮ್ಮ ನಾಡಿನ ಸಾಹಿತ್ಯವನ್ನು ಮತ, ಧರ್ಮ, ಕಾಲ, ಕವಿ, ಪ್ರೇರಣೆ, ಭಾಷೆ, ರಾಜಾಶ್ರಯ ಮೊದಲಾದವುಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ವಿಭಾಗಿಸುವ ಕ್ರಮವನ್ನು ನಮ್ಮ ವಿದ್ವಾಂಸ ಮಂಡಳಿ ಮಾಡಿದೆ. ಆರ್. ನರಸಿಂಹಾಚಾರ್ ಅವರು ಜೈನಯುಗ, ವೀರಶೈವ ಯುಗ, ಬ್ರಾಹ್ಮಣಯುಗವೆಂದೂ ಧರ್ಮಗಳ ಆಧಾರದ ಮೇಲೆ ವಿಭಾಗಿಸುವ ಪ್ರಯತ್ನ ಮಾಡಿದ್ದಾರೆ. ಆದರೆ

ಯಾವೊಬ್ಬ ಕವಿಯನ್ನು ಒಂದು ಮತದ ನೆರಳಿನಲ್ಲಿ ತರುವುದು ಅಷ್ಟು ಸಮಂಜಸವಲ್ಲ. ಏಕೆಂದರೆ ಪ್ರತಿಯೊಬ್ಬ ಕವಿಯ ಆತ್ಮಸಾಕ್ಷಿಯಲ್ಲೂ 'ದೇವನೊಬ್ಬ ನಾಮ ಹಲವು' ಮಂತ್ರವೇ ಪ್ರತಿಧ್ವನಿಸುತ್ತದೆ. ಮಾನವರನ್ನು ಮಾನವರಾಗಿ ನೋಡುವ ಮಾನವೀಯ ಧರ್ಮವನ್ನು ನಮ್ಮ ಕವಿ ಪುಂಗವರು ಅನುಸರಿಸಿಕೊಂಡು ಬಂದಿದ್ದಾರೆ. ಆದ್ದರಿಂದ ಒಂದು ಧರ್ಮದ ನೆಲೆಗಟ್ಟಿನಲ್ಲಿ ಸಾಹಿತ್ಯವನ್ನು ಹಿಡಿದಿಡುವುದು ಕಷ್ಟಕರ. ಸಾಹಿತ್ಯವು ಧರ್ಮದೊಂದಿಗೆ ಮಾನವನ ಬದುಕಿನ ಘನತೆಯನ್ನು ಎತ್ತಿಹಿಡಿಯಲು ಹಂಬಲಿಸುತ್ತದೆ.

ತಿ.ತಾ. ಶರ್ಮರು ಕ್ಷಾತ್ರಯುಗ, ಮತಪ್ರಚಾರಕರ ಯುಗ, ಸಾರ್ವಜನಿಕ ಯುಗ, ಆಧುನಿಕ ಯುಗವೆಂದು ವಿಭಾಗಿಸಿದ್ದಾರೆ. ಆದರೆ ಯಾವುದೇ ಒಂದು ಕಾಲಘಟ್ಟದಲಿ ಒಂದೇ ನೆಲೆಯ ಮೌಲ್ಯಗಳು ಪ್ರತಿಪಾದನೆಗೊಳ್ಳುವುದು ಸುಲಭವಲ್ಲ. ಶೌರ್ಯವು ಒಂದು ಯುಗಧರ್ಮವಾಗದೆ ಕಾಲಕಾಲಕ್ಕೆ ಪರಿಷ್ಕರಣೆಗೊಳ್ಳುತ್ತ ಬರುತ್ತಿದೆ. ಆಧುನಿಕ ಯುಗದಲ್ಲೂ ಶೌರ್ಯ–ಸಾಹಸಗಳು ರಾಜಧರ್ಮವಾಗಿ ಸ್ವೀಕೃತವಾಗಿವೆ. ಮತಧರ್ಮಗಳ ಪ್ರಚಾರವೂ ಕೂಡ ಒಂದು ಕಾಲಕ್ಕೆ ಸೀಮಿತವಾಗಿಲ್ಲ. ದಿನನಿತ್ಯವು ಧರ್ಮಗಳ ಪ್ರಚಾರ ನಡೆಯುತ್ತಿದೆ. ನಮ್ಮ ನಾಡಿನಲ್ಲಿ ಬೌದ್ಧ, ಜೈನ, ವೈದಿಕ, ಇಸ್ಲಾಂ, ಕ್ರೈಸ್ತ ಮೊದಲಾದ ಧರ್ಮಗಳು ಕಾಲಾನುಕ್ರಮದಲ್ಲಿ ಪ್ರಚಾರಗೊಳ್ಳಲಿಲ್ಲ ಎಂಬುದನ್ನು ತಿಳಿಯಬಹುದು.

ಬಿ.ಎಂ.ಶ್ರೀ ಅವರು ಆರಂಭಕಾಲ, ಮತ ಪ್ರಾಬಲ್ಯದ ಕಾಲ, ನವೀನಕಾಲಗಳೆಂದು ವಿಂಗಡಿಸಿದ್ದಾರೆ. ಈ ವಿಭಾಗಕ್ರಮವು ಕೂಡ ಸಮಂಜಸವಲ್ಲ ಎಂಬುದನ್ನು ಹಿರಿಯ ವಿದ್ವಾಂಸರು ತರ್ಕಿಸಿದ್ದಾರೆ. ಡಾ. ರಂ.ಶ್ರೀ. ಮುಗಳಿಯವರು ಪಂಪಪೂರ್ವಯುಗ, ಪಂಪಯುಗ, ಬಸವಯುಗ, ಕುಮಾರವ್ಯಾಸಯುಗ ಎಂದು ಆಯಾ ಕಾಲದ ಪ್ರಮುಖ ಕವಿಗಳ ಕಾಲವನ್ನು ಹಿನ್ನೆಲೆಯಾಗಿಟ್ಟುಕೊಂಡು ಕನ್ನಡ ಸಾಹಿತ್ಯ ಬೆಳೆದುಬಂದ ಸನ್ನಿವೇಶಗಳನ್ನು ಗುರುತಿಸಿದ್ದಾರೆ. ತ.ಸು. ಶಾಮರಾಯರು ಪಂಪಪೂರ್ವಯುಗ, ಪಂಪಯುಗ, ಹರಿಹರಯುಗ, ಕುಮರವ್ಯಾಸಯುಗವೆಂದು ವಿಭಾಗಿಸಿ ಮುಗಳಿಯವರು ವಿಭಾಗಿಸಿದ ಕ್ರಮದಲ್ಲಿ ಬಸವಣ್ಣನನ್ನು ಕವಿಗಳ ಸಾಲಿನಿಂದ ಹೊರತೆಗೆದು ಆ ಸ್ಥಳದಲ್ಲಿ ಹರಿಹರನನ್ನು ತರುವ ಪ್ರಯತ್ನ ಮಾಡಿದ್ದಾರೆ. ಆದರೆ ಅಂತಿಮವಾಗಿ ಪೂರ್ವದ ಹಳ್ಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡವೆಂದು ಭಾಷಾ ರಚನೆಯ ಆಧಾರದ ಮೇಲೆ ಅಭ್ಯಾಸ ಮಾಡುವ ಕ್ರಮ ರೂಢಿಗೆ ಬಂದಿದ್ದು, ಈ ಕ್ರಮವೆ ಇಂದು ರೂಢಿಯಲ್ಲಿದ್ದು ಎಲ್ಲರ ಒಪ್ಪಿತ ಅಭಿಮತವಾಗಿದೆ. ಹೀಗೆ ತಮ್ಮ ತಮ್ಮ ಅನುಭವದ ಹಿನ್ನೆಲೆಯಲ್ಲಿ ಹಲವಾರು ವಿದ್ವಾಂಸರು, ಕವಿಗಳು ಕನ್ನಡ ಸಾಹಿತ್ಯವನ್ನು ವಿಭಾಗಿಸಿದ್ದಾರೆ. ಆದರೆ ಬಿ.ಎಂ.ಶ್ರೀ. ಹೇಳುವಂತೆ "ಹೊಳೆ ಬಂದು ಹೊಳೆ ಇಳಿದು ಹೋದಂತೆ ಕನ್ನಡ ಸಾಹಿತ್ಯದಲ್ಲಿ ಈ ರೀತಿ ಜೈನ, ವೀರಶೈವ, ಬ್ರಾಹಣ ಸಾಹಿತ್ಯಗಳು ಒಮ್ಮೆ ಅಭ್ಯುದಯ ಸ್ಥಿತಿಯಲ್ಲಿಯೂ, ಒಮ್ಮೆ ಕ್ಷೀಣ ದೆಸೆಯಲ್ಲಿಯೂ ಇರುತ್ತ, ಹಳೆಯ ನೀರು ಹೊಸ ನೀರು ಬೆರೆತುಕೊಂಡು ಬರುತ್ತಿರುವುವು" ಎಂಬ ಅಭಿಪ್ರಾಯವು ಧರ್ಮ, ಸಾಹಿತ್ಯದ ದೃಷ್ಟಿಯಿಂದ ಮಹತ್ವವನ್ನು ಪಡೆದುಕೊಳ್ಳುತ್ತದೆ. ಒಟ್ಟಿನಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆಯಲು ಆರಂಭಿಸಿದ ಡಿ.ಎಲ್. ನರಸಿಂಹಾಚಾರ್, ರಂ.ಶ್ರೀ. ಮುಗಳಿ, ತ.ಶು. ಶಾಮರಾಯ, ಬಿ.ಎಂ.ಶ್ರೀ., ರಾ. ನರಸಿಂಹಾರಾಚಾರ್, ಕೆ. ವೆಂಕಟರಾಮಪ್ಪ ಮೊದಲಾದ ವಿದ್ವಾಂಸರು ಕೇವಲ ಸಾಹಿತ್ಯವನ್ನು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಪ್ರಭಾವಶಾಲಿ ಕವಿಗಳನ್ನು ಗುರಿಯಲ್ಲಿಟ್ಟುಕೊಂಡು ವಿಭಜನೆ ಮಾಡಲಿಲ್ಲ. ಅಧ್ಯಯನ ದೃಷ್ಟಿಯಿಂದ ತಮಗೆ ಅನುಕೂಲವಾದ

ಮತಧರ್ಮಗಳನ್ನು ಅಳತೆಗೋಲಾಗಿಟ್ಟುಕೊಂಡು ವಿಭಜನೆ ಮಾಡಿದ್ದಾರೆ ಎಂಬುದನ್ನು ಅರಿಯಬೇಕಾಗುತ್ತದೆ.

ಹತ್ತರಿಂದ ಹನ್ನೆರಡನೇ ಶತಮಾನದವರೆಗೆ ಜೈನ ಮತವು ತುಂಬು ಹೊಳೆಯಾಗಿ ನಾಡಿನಲ್ಲೆಲ್ಲ ಮೈದುಂಬಿ ಹರಿದರೆ, ಹನ್ನೆರಡರಿಂದ ಹದಿಮೂರನೇ ಶತಮಾನಗಳವರೆಗೆ ವೀರಶೈವ ಮತದ ಸಾಹಿತ್ಯವು ಜನ ಸಾಮಾನ್ಯರ ಭಾಷೆಯನ್ನು ತನ್ನ ಅಭಿವ್ಯಕ್ತಿ ಮಾಧ್ಯಮವಾಗಿರಿಸಿಕೊಂಡು ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಅಸ್ಮಿತೆಯನ್ನು ಕಲ್ಪಿಸಿಕೊಟ್ಟಿತು. ನಂತರದ ಕಾಲಘಟ್ಟದಲ್ಲಿ ವೈಷ್ಣವ ಮತದ ಕೀರ್ತನ ಪರಂಪರೆಯು ಭಾಗವತ ಸಂಪ್ರದಾಯಕ್ಕೆ ಮುನ್ನುಡಿ ಬರೆದು, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ತನ್ನ ಸ್ಥಾನವನ್ನು ಕಂಡುಕೊಂಡಿತು. ಈ ಮೂರು ಮತಗಳ ಸಾಹಿತ್ಯವನ್ನು ಕಾಲಘಟ್ಟಗಳಾಗಿ ವಿಂಗಡಿಸಲು ಸಾಧ್ಯವಿಲ್ಲದಿದ್ದರೂ, ಅವುಗಳ ರಚನೆ ಮತ್ತು ವಸ್ತುವಿನ ಆಯ್ಕೆಯ ಮೂಲಕ ಗುರುತಿಸುವ ಕೆಲಸ ನಡೆಯುತ್ತಿದೆ. ಬೇಂದ್ರೆ ಹೇಳುವಂತೆ 'ಜೈನರ ಕಾವ್ಯದ, ಶರಣರ ವಚನದ, ದಾಸರ ಹಾಡಿನದೀನಾಡು' ಎಂಬುದು ಇಲ್ಲಿ ಉಲ್ಲೇಖನೀಯ. ನಮ್ಮ ಕವಿಗಳು ಧಾರ್ಮಿಕ ಕಾವ್ಯವನ್ನೇ ರಚಿಸಲಿ, ಲೌಕಿಕ ಕಾವ್ಯವನ್ನೇ ರಚಿಸಲಿ ಅವುಗಳಲ್ಲಿ ಧರ್ಮವು ಒಂದಲ್ಲ ಒಂದು ಬಗೆಯಲ್ಲಿ ಮೂಲ ಸೆಲೆಯಾಗಿ ಪ್ರತಿಪಾದಿತವಾಗಿರುವುದು ತಿಳಿಯುತ್ತದೆ.

ಶ್ರೀಮಂತ ಪರಂಪರೆಯನ್ನು ಹೊಂದಿರುವ ನಮ್ಮ ನಾಡು ಹಲವು ಧರ್ಮಗಳ ನೆಲೆವೀಡು. ಪ್ರಾಚೀನ ಕಾಲದಿಂದ ಸ್ವಾತಂತ್ರ್ಯ ಪಡೆಯುವವರೆಗೂ ನಮ್ಮನ್ನಾಳಿದ ವಿವಿಧ ಮತ ಧರ್ಮದ ರಾಜ ಮಹಾರಾಜರು ಮತ್ತು ಬ್ರಿಟಿಷ್ ಅಧಿಕಾರಿಗಳು ತಮ್ಮ ತಮ್ಮ ಧರ್ಮಗಳನ್ನೇ ರಾಜಧರ್ಮಗಳಾಗಿ ಮಾಡಿ, ಆಳಿಸಿಕೊಳ್ಳುವ ಜನತೆಯನ್ನು ತಮ್ಮ ಮತ ಧರ್ಮಗಳಿಗೆ ಮತಾಂತರಿಸಿದ ನಿದರ್ಶನಗಳು ಒಂದೆಡೆಯಾದರೆ, ಧರ್ಮ ಸಹಿಷ್ಣು ಪ್ರಭುಗಳು ಎಲ್ಲ ಮತ ಧರ್ಮಗಳನ್ನು ಒಂದೇ ದೃಷ್ಟಿಯಲ್ಲಿ ಕಂಡು, ಸರ್ವ ಜನರನ್ನು ತನ್ನವರೆಂದು ಭಾವಿಸಿ, ಸರ್ವರ ಏಳ್ಗೆಗೆ ಶ್ರಮಿಸಿದ ಮಾನವ ಬಂಧುತ್ವವು ಮತ್ತೊಂದು ಹೆಮ್ಮರವಾಗಿ ಇಂದಿಗೂ ಅಜರಾಮರರಾಗಿದ್ದಾರೆ.

ಶಿವರಾಮ ಕಾರಂತರು "ನಮ್ಮ ಪಾಲಿಗೆ ಧರ್ಮವಾಗಿ ಬಂದಿರುವ ತತ್ವಜ್ಞಾನಗಳು ಬಹುವಾಗಿ ಈ ತೆರವಾಗಿ ಉಂಟಾದುವೆಂಬುದಕ್ಕೆ ಅವುಗಳ ತೀರ್ಮಾನಗಳೇ ಸಾಕ್ಷಿಯಾಗಿವೆ. ಅವುಗಳಲ್ಲಿ ಬದುಕೇ ಮುಖ್ಯವಾಗಿ ಕಾಣಿಸುವ ಬದಲು, 'ಸಾವು' ಅಳತೆ ಮೀರಿ ನಿಂತಿದೆ. ಬಾಳುವುದು ಧರ್ಮವೆನ್ನಿಸುವ ಬದಲು ಹಿಗ್ಗಿಸಿದ ಸಾವಿನಿಂದಾಗಿ ಉದಯಿಸಿದ 'ಪರವೇ', 'ಇಹ' ಸವಿಯಲ್ಲಿದ್ದು, ಬಂಧನವೂ ಎನಿಸಿಬಿಟ್ಟಿದ್ದೆ. ಕಂಡ ಸ್ವಲ್ಪ ಬಾಳ್ವೆ ನೀರಸವೂ ಅಲ್ಪವೂ ಆಗಿ ಕಾಣದ್ದು ಸರಸವೂ ಹಿರಿದೂ ಅನಿಸಿದೆ"[3] ಎಂದು ಪುರಾತನ ಮತಧರ್ಮಗಳ ನೀತಿಸಾರವನ್ನು ಪ್ರಶ್ನಿಸುತ್ತಾರೆ. ಹೀಗಾಗಿ ಧರ್ಮವೆಂಬುದು ಸರ್ವ ಕಾಲಕ್ಕೂ ಮಾನವೀಯತೆಯನ್ನು ಪ್ರತಿಪಾದಿಸುವ ಬಲವಾದ ಆಯುಧವಾಗಿರುತ್ತದೆ. ನಿದರ್ಶನಕ್ಕೆ ಅಖಂಡ ಭರತವನ್ನು ಆಳ್ವಿಕೆ ಮಾಡಿದ ಅಶೋಕ ಬೌದ್ಧಧರ್ಮದ ಪ್ರಭಾವಕ್ಕೆ ಒಳಗಾಗಿ ಅಹಿಂಸೆಯನ್ನೇ ತನ್ನ ಆಡಳಿತದ ಚುಕ್ಕಾಣಿಯ ನಿಯಮವನ್ನಾಗಿಸಿಕೊಂಡಿದ್ದು ಧರ್ಮದ ಪ್ರಭಾವಳಿಯನ್ನು ಕಾಣಬಹುದು.

ಇಂತಹ ಮಣ್ಣಿನಲ್ಲಿ ಮೊದಲಿಗೆ ಬೌದ್ಧಧರ್ಮವು ಕಾಲಿಟ್ಟ ಸನ್ನಿವೇಶಗಳನ್ನು ಹಲವು ಆಧಾರಭೂತವಾದ ವಿಷಯಗಳ ಮೂಲಕ ನಮ್ಮ ವಿದ್ವಾಂಸ ಮಂಡಳಿ ಸಾಬೀತುಪಡಿಸಿದೆ. ಈ ಧರ್ಮ ನಮ್ಮ ನೆಲದಲ್ಲಿ ಪ್ರಚಾರದಲ್ಲಿದ್ದ ಸಂದರ್ಭಗಳಲ್ಲಿ ಬೌದ್ಧ ಸಾಹಿತ್ಯ ರೂಪುಗೊಂಡಿತೆ ಎಂಬುದರ ಬಗ್ಗೆ

ಹಲವು ಹಿರಿಯ ತಜ್ಞರು ಸಂಶೋಧನೆಯಲ್ಲಿ ತೊಡಗಿದ್ದಾರೆ. ಆದರೆ ಇಲ್ಲಿಯವರೆಗೂ ಯಾವುದೇ ಸಾಹಿತ್ಯ ಕೃತಿಗಳು ದೊರೆಯದಿರುವುದು ನಮ್ಮ ದೌರ್ಭಾಗ್ಯವೇ ಸರಿ. ಬೌದ್ಧಧರ್ಮದ ಮಾತೃಭೂಮಿ ಭರತಭೂಮಿಯಾಗಿದೆ. ನಮ್ಮ ನಾಡು ಕೂಡ ಭಾರತಾಂಬೆಯ ಹಿರಿಯ ಮಗಳಾದ್ದರಿಂದ ಈ ಧರ್ಮವು ಒಂದು ಕಾಲದಲ್ಲಿ ಇತ್ತೆಂಬುದು ನಿರ್ವಿವಾದದ ಸಂಗತಿ. ಆದರೆ ಸಾಹಿತ್ಯವು ಧರ್ಮ ಉದಯವಾದ ಕಾಲದಲ್ಲಿ ಇತ್ತೆಂಬುದು ಚರ್ಚಾಸ್ಪದ ವಿಷಯ.

ಟಿ.ಎಸ್. ವೆಂಕಣ್ಣಯ್ಯ ಅವರು 'ಬೌದ್ಧರು ಕನ್ನಡದ ಆದಿಕವಿಗಳೆಂದೂ, ಬೌದ್ಧಧರ್ಮದ ನಾಶದೊಂದಿಗೆ ಬೌದ್ಧ ಗ್ರಂಥಗಳು ನಾಶವಾಗಿರಬೇಕೆ'ಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಈ ವಾದವನ್ನು ಬಿ.ಎಂ.ಶ್ರೀ., ರಾ. ನರಸಿಂಹಾಚಾರ್ ಮತ್ತು ಎನ್. ಶ್ರೀಕಂಠಶಾಸ್ತ್ರಿಗಳು ಒಪ್ಪುವುದಿಲ್ಲ. ಬೌದ್ಧಧರ್ಮದ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ರಚನೆಗೊಂಡ ಪ್ರಮುಖ ಕೃತಿಗಳೆಂದರೆ, ಅಶ್ವತ್ಥನಾರಾಯಣ ಅವರ 'ಬೌದ್ಧಾವತಾರ', 'ಬುದ್ಧಗೀತೆ'. ಗೋವಿಂದಪೈ ಅವರ 'ವೈಶಾಖಿ'. ಸಾಲಿರಾಮಚಂದ್ರರಾಯರ 'ಜಾತಕ ಕಥೆಗಳು', ರಾಜರತ್ನಂರ 'ಚೀನಾ ದೇಶದ ಬೌದ್ಧ ಯಾತ್ರಿಕರು', 'ಬೌದ್ಧಧರ್ಮದ ಇತಿಹಾಸ', ಬಿ. ಪುಟ್ಟಸ್ವಾಮಯ್ಯನವರ 'ಗೌತಮಬುದ್ಧ'. ಶ್ರೀರಂಗರು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿದ 'ಭಗವಾನ್ ಬುದ್ಧ'. ಎಸ್.ವಿ. ಪರಮೇಶ್ವರಭಟ್ಟರು ಅಶ್ವಘೋಷನ ಸಂಸ್ಕೃತದ 'ಬುದ್ಧಚರಿತೆ'ಯನ್ನು ಕನ್ನಡಕ್ಕೆ ತಂದರು. ಶಿವರಾಮ ಕಾರಂತರು 'ಕಿಸಾಗೌತಮಿ'ಯನ್ನು ಕನ್ನಡಿಸಿದ್ದಾರೆ. ಜೊತೆಗೆ ಎಂ.ಆರ್.ಶ್ರೀ., ಕಡವ ಶಂಭುಶರ್ಮ, ಎಲ್. ಬಸವರಾಜು ಮೊದಲಾದವರು ಬುದ್ಧಧಮ್ಮ ತತ್ವದ ನೆಲೆಯಲ್ಲಿ ಕಥೆ, ಕವನ, ನಾಟಕ, ಸಂಶೋಧನಾ ಕೃತಿಗಳನ್ನು ರಚನೆಗೈದಿರುವುದು ತಿಳಿದುಬರುತ್ತದೆ. ಅಂದರೆ ಬೌದ್ಧಮತವು ನಮ್ಮ ಕವಿಗಳ ಮೇಲೆ ಮೊದಲಿಗೆ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಆದರೆ ಯಾವುದೆ ಪ್ರಾಚೀನ ಗ್ರಂಥಗಳು ದೊರೆಯದೆ ಇರುವುದರಿಂದ ಕನ್ನಡ ಸಾಹಿತ್ಯದ ಆರಂಭವನ್ನು ಜೈನಮತದಲ್ಲಿ ಗುರುತಿಸುವುದು ಸೂಕ್ತವಾಗಿದೆ.

ಬೌದ್ಧಧರ್ಮದಂತೆ ಜೈನಧರ್ಮವು ಸನಾತನವಾದ ಭಾರತೀಯ ಧರ್ಮಗಳಲ್ಲಿ ಒಂದು. ಬೌದ್ಧಧರ್ಮದ ಹಾಗೆ ವಿಶ್ವ ವ್ಯಾಪ್ತಿಯನ್ನು ಮತ್ತು ಅಖಂಡ ಭರತಖಂಡವನ್ನು ವ್ಯಾಪಿಸದಿದ್ದರು ನಮ್ಮ ನಾಡಿನ ಮಣ್ಣಿನಲ್ಲಿ ಹಚ್ಚಹಸಿರಾಗಿ ಹರಡಿಕೊಂಡಿದ್ದನ್ನು ನಮ್ಮ ಇತಿಹಾಸದ ಪುಟಗಳು ಸಾದರಪಡಿಸುತ್ತವೆ. ಅಹಿಂಸಾ ಪರಮೋಧರ್ಮದಲ್ಲಿ ನಂಬಿಕೆ ಹೊಂದಿದ್ದ ಜೈನಮತವು, ಜೀವದಯೆಯನ್ನೇ ತನ್ನ ಮೂಲಮಂತ್ರವಾಗಿ ಇರಿಸಿಕೊಂಡಿತ್ತು. ಇಂತಹ ಪ್ರಸಿದ್ಧ ಧರ್ಮ ಕರ್ನಾಟಕಕ್ಕೆ ಕಾಲಿರಿಸಿದ್ದು ಅಶೋಕನ ಮೊಮ್ಮಗನಾದ ಸಂಪ್ರತಿ ಚಂದ್ರಗುಪ್ತನ ಕಾಲದಲ್ಲಿ. ಈತ ಉತ್ತರ ಭಾರತದಲ್ಲಿ ಕ್ಷಾಮ ತಲೆದೋರಿದಾಗ ಜೈನಮುನಿಗಳೊಂದಿಗೆ ಶ್ರವಣಬೆಳಗೊಳಕ್ಕೆ ಬಂದು ನೆಲೆಸಿದನೆಂದು ಇತಿಹಾಸ ತಿಳಿಸುತ್ತದೆ. ಮುಂದೆ 10ನೇ ಶತಮಾನದಿಂದ 12ನೇ ಶತಮಾನದವರೆಗೆ ಜೈನಧರ್ಮವು ಸಾರ್ವಭೌಮ ಧರ್ಮವಾಗಿ ರಾಜ್ಯದಲ್ಲಿ ಉನ್ನತ ಧರ್ಮದ ಸ್ಥಾನವನ್ನು ಪಡೆದುಕೊಂಡಿತ್ತು. ಗಂಗರು, ರಾಷ್ಟ್ರಕೂಟರು, ಚಾಲುಕ್ಯರು, ಹೊಯ್ಸಳರು ಮೊದಲಾದ ರಾಜವಂಶಗಳು ಜೈನಧರ್ಮವನ್ನು ಪ್ರೋತ್ಸಾಹಿಸುವುದರೊಂದಿಗೆ ಆ ಧರ್ಮದ ಸಾಹಿತ್ಯ ರಚನೆಗೆ ಆಶ್ರಯದಾತ ಮನೆತನಗಳಾಗಿದ್ದವು. ಹೀಗೆ ಒಂದು ಕಾಲದಲ್ಲಿ ರಾಷ್ಟ್ರಧರ್ಮವಾಗಿ ಜನತೆಯ ಕಲ್ಯಾಣ ಮಾಡಿದ ಜೈನಧರ್ಮವು ಕನ್ನಡ ಸಾಹಿತ್ಯವನ್ನು ಸಮೃದ್ಧವಾಗಿ ಬೆಳೆಸಿತು. ಇಂತಹ ಸಾಹಿತ್ಯವನ್ನು ಶಾಸನ ಸಾಹಿತ್ಯ, ತೀರ್ಥಂಕರ ಕಥೆ, ಚಕ್ರವರ್ತಿಗಳ ಕಥೆ, ಮಹಾಪುರುಷರ ಕಥೆಗಳು, ಬಲದೇವ ವಾಸುದೇವ ಪ್ರತಿಪಾದಿಸುವ ಚರಿತ್ರೆಗಳು,

ಉಪಸರ್ಗ ಕೇವಲಿಗಳ ಕಥೆಗಳು ಎಂದು ವಿಂಗಡಿಸಬಹುದು. ಇವುಗಳೊಂದಿಗೆ ಹೊಂದಿಕೊಂಡ ವ್ಯಾಖ್ಯಾನ, ಟೀಕೆ, ಸ್ತುತಿ, ವಿಡಂಬನೆ ಮೊದಲಾದವುಗಳು ಕನ್ನಡ ಸಾಹಿತ್ಯದಲ್ಲಿ ಹುಲುಸಾಗಿ ಬೆಳೆದಿವೆ.

ಜೈನ ಧರ್ಮವು ಕನ್ನಡ ಸಾಹಿತ್ಯ ಬೆಳವಣಿಗೆಗೆ ಮಹತ್ತರ ಕೊಡುಗೆ ನೀಡಿದೆ. ಕನ್ನಡದ ಆದಿ ಕವಿಗಳು ಜೈನರಾಗಿದ್ದಾರೆ. ಮುಖ್ಯವಾಗಿ ಜೈನ ಕವಿಗಳು ಮತಧರ್ಮಕ್ಕೆ ಕಟ್ಟುಬಿದ್ದರೂ, ತಮ್ಮ ಸೃಜನಶೀಲತೆಯನ್ನು ಮೆರೆದಿದ್ದಾರೆ. ಆ ಸೃಜನಶೀಲತೆಯಲ್ಲಿಯೇ ಜೈನ ಧರ್ಮದ ನೀತಿಸಾರವನ್ನು ಎತ್ತಿ ಹಿಡಿಯುವ ಕೆಲಸ ಮಾಡಿದ್ದಾರೆ. ಜೈನಮತಕ್ಕೆ ಸಂಬಂಧಿಸಿದಂತೆ ದೊರೆಯುವ ಮೊದಲ ಸಾಹಿತ್ಯ ಕುರುಹು ಕ್ರಿ.ಶ. 700ರ ಶ್ರವಣಬೆಳಗೊಳದ ನಂದಿಸೇನ ಮುನಿ ಕುರಿತ ಶಾಸನ. ನಂದಿಸೇನ ಮುನಿಯು ಇಹಲೋಕದ ಬದುಕಿಗೆ ಹೇಸಿ ಸಲ್ಲೇಖನವ್ರತದ ಮೂಲಕ ಸ್ವರ್ಗಸ್ಥನಾದ ವಿಷಯವನ್ನು ಈ ಶಾಸನ ಒಳಗೊಂಡಿದೆ. ಅಸಗನು 'ವರ್ಧಮಾನ ಪುರಾಣ' ಬರೆದಿದ್ದಾನೆ ಎಂದು ತಿಳಿಯಲಾಗಿದೆ. ಸಂಸ್ಕೃತ ಗ್ರಂಥವೊಂದರಲ್ಲಿ 'ಶ್ರೀ ಅಸಗ ಭೂಪಕೃತೇ ವರ್ಧಮಾನಚರಿತೆ' ಎಂಬ ಹೇಳಿಕೆ ಇರುವುದರಿಂದ ಈತ ರಾಜನಾಗಿರಬೇಕೆಂದು ತಿಳಿಯುತ್ತದೆ.

'ಜೈನ ಕವಿಗಳು ಮುಖ್ಯವಾಗಿ ಬೆಳಗುವೆನಲ್ಲಿಲೌಕಿಕಮನಿಲ್ಲಿ ಜಿನಾಗಮುಮಂ' ಎಂಬ ತತ್ವದಲ್ಲಿ ನಂಬಿಕೆ ಹೊಂದಿದ್ದರು. ಹೀಗಾಗಿಯೇ ಒಂದು ಲೌಕಿಕ ಕಾವ್ಯ, ಮತ್ತೊಂದು ಅಲೌಕಿಕ ಕಾವ್ಯ ರಚನೆಗೆ ತೊಡಗಿದರು. ಈ ಪರಂಪರೆಯ ನಿರ್ಮಾಪಕನಾಗಿ 1ನೇ ಗುಣವರ್ಮ ಕಂಡುಬಂದರೂ ಅವನ ಕೃತಿಗಳಾದ 'ಹರಿವಂಶ' ಮತ್ತು 'ಶೂದ್ರಕ' ಅಲಭ್ಯವಾಗಿವೆ. ಎರಡನೇ ಗುಣವರ್ಮನ ಕಾಲ ಕ್ರಿ.ಶ. 1125. ಈತನ ಕೃತಿ 'ಪುಷ್ಪದಂತ ಪುರಾಣ' ಮತ್ತು 'ಸುಜನೋತ್ತಂಸನ' ಕೃತಿಗಳು 'ಗುಮ್ಮಟ ಸ್ತುತಿ', 'ನಕ್ಷತ್ರ ಮಾಲಿಕೆ'ಗಳು ಕೂಡ ಲಭ್ಯವಿಲ್ಲ. ಈ ಎಲ್ಲ ಹಿನ್ನೆಲೆಯಲ್ಲಿ ಪಂಪನೇ ಈ ಮಾರ್ಗ ನಿರ್ಮಾಪಕನೆಂದು ಕರೆಯಲಾಗಿದೆ. ಜೈನಮತ ಪರಂಪರೆಯಲ್ಲಿ ಪಂಪನೇ ಆದಿಕವಿ. ಗುಣನಂದಿ, ರನ್ನ, ಪೊನ್ನ, ಜನ್ನ, ಚಾವುಂಡರಾಯ, ನಾಗಚಂದ್ರ, ನಯಸೇನ, ಬ್ರಹ್ಮಶಿವ, 2ನೇ ನಾಗವರ್ಮ, ನೇಮಿಚಂದ್ರ, ಆಂಡಯ್ಯ, ಪಾರ್ಶ್ವನಾಥ ಪಂಡಿತ, ಕಮಲಭವ ಮುಂತಾದವರು ಜೈನಧರ್ಮದ ಸಾರಸತ್ವವನ್ನು ಪ್ರತಿಪಾದಿಸುವುದರೊಂದಿಗೆ ಮಾನವೀಯ ಮೌಲ್ಯವನ್ನು ಎತ್ತಿ ಹಿಡಿಯುವ ಕೆಲಸ ಮಾಡಿದ್ದಾರೆ. ತಮ್ಮ ಪ್ರತಿಭಾವಂತಿಕೆಯಿಂದ ಧರ್ಮದ ಪ್ರಚಾರವೇ ಮೂಲ ಉದ್ದೇಶವಾದರೂ, ಕಾವ್ಯದ ಮೂಲಕ ಅಂದಿನ ಜನಜೀವನದ ಸಾಮಾಜಿಕ–ಸಾಂಸ್ಕೃತಿಕ ಬದುಕನ್ನು ಅನಾವರಣ ಮಾಡಿದ್ದಾರೆ. ಅಂದಿನ ಸಮಾಜವು ಮತ–ಧರ್ಮಕ್ಕೆ ನೀಡುತ್ತಿದ್ದ ಪ್ರೋತ್ಸಾಹವನ್ನು ನೋಡುವುದಾದರೆ, ಲೌಕಿಕ ಕೃತಿಗಳಿಗಿಂತ ಧಾರ್ಮಿಕ ಕೃತಿಗಳ ಪ್ರತಿಗಳೇ ಅಧಿಕವಾಗಿ ಲಭ್ಯವಾಗುವುದರಿಂದ ಧರ್ಮವೇ ರಾಜ ಮತ್ತು ಕವಿಗಳ ಮೂಲಮಂತ್ರವೆಂಬುದು ವೇದ್ಯವಾಗುತ್ತದೆ. ಧರ್ಮ ಪ್ರತಿಪಾದನೆಗಾಗಿ ಧಾರ್ಮಿಕ ಕೃತಿಗಳನ್ನು ಸಹಸ್ರಾರು ಪ್ರತಿ ಮಾಡಿಸಿ ದಾನ, ಧರ್ಮ ಮಾಡಿದ ಉದಾಹರಣೆಗಳಿವೆ. ಪೊನ್ನನ ಶಾಂತಿನಾಥ ಪುರಾಣವನ್ನು ದಾನ ಚಿಂತಾಮಣಿ ಅತ್ತಿಮಬ್ಬೆಯು ಸಹಸ್ರಾರು ಪ್ರತಿಗಳನ್ನು ಮಾಡಿಸಿ ದಾನ ಮಾಡಿದ ಘಟನೆಗಳನ್ನು ನೋಡಬಹುದು. ಆದ್ದರಿಂದಲೇ ಧರ್ಮ ಮತ್ತು ಕಾವ್ಯಗಳು ಜೊತೆ ಜೊತೆಯಾಗಿ ಒಂದೇ ದೋಣಿಯಲ್ಲಿ ಪ್ರಯಾಣ ಮಾಡಿವೆ.

ಪಂಪನಿಗಿಂತ ಹಿಂದಿನವನಾದ ಶಿವಕೋಟ್ಯಾಚಾರ್ಯನು ಕನ್ನಡದ ಮೊದಲ ಗದ್ಯ ಗ್ರಂಥವಾದ 'ವಡ್ಡಾರಾಧನೆ' ಕೃತಿ ರಚಿಸಿದ್ದಾನೆ. ಈ ಕೃತಿಯ ಪೀಠಿಕೆಯಲ್ಲಿ 'ಶ್ರೀವೀರ ವರ್ಧಮಾನ ಭಟ್ಟಾರಕರ್ಗೆ ನಮಸ್ಕಾರಂ ಗೆಯ್ದು ದೇವೋಪಸರ್ಗ ಮನುಷ್ಯೊಪಸರ್ಗ ತಿರಕೋಪಸರ್ಗಮ … ಸರ್ವಾರ್ಥ ಸಿದ್ಧಿಯೊಳ್ ಪುಟ್ಟಿದ ಮಹಾಪುರುಷರ್ಗಳ ಕಥೆಗಳಂ ಪೇಳ್ವಿಲ್ಲಿ' ಎಂದು ಹೇಳುವ ಮೂಲಕ ತನ್ನ

ಮೂಲ ಉದ್ದೇಶವನ್ನು ಸ್ಪಷ್ಟಪಡಿಸುತ್ತಾನೆ. ಈ ಕಥೆಗಳನ್ನು 'ಉಪಸರ್ಗ ಕೇವಲಿಗಳ ಕಥೆ' ಎಂದು ಕರೆದಿದ್ದಾನೆ. ಉಪಸರ್ಗ ಎಂದರೆ 'ಎಡರು ತೊಡರು'. ಈ 'ಎಡರು ತೊಡರು'ಗಳು ಒಂದು ದೇಹದಿಂದ ಒದಗಿದರೆ, ಮತ್ತೊಂದು ಪರಿಸರದಿಂದ ಎದುರಾಗುವ ತೊಂದರೆಗಳು. ಸಾಧನೆಯ ಹಾದಿಯಲ್ಲಿ ಈ ಎಲ್ಲ ತೊಂದರೆಗಳನ್ನು ಅಂದರೆ ಪರಿಷಹ ಉಪಸರ್ಗಗಳನ್ನು ಎದುರಿಸಿ ಕೇವಲಿ(ಮೋಕ್ಷ)ಯಾದವರ ಕಥೆಯೇ ವಡ್ಡಾರಾಧನೆಯ ಸಾರಸತ್ವ. ಇದರ ಮೂಲ ಉದ್ದೇಶ ಧರ್ಮದ ಪ್ರತಿಪಾದನೆಯಾಗಿದೆ. ಆದರೆ ಧರ್ಮದ ಪ್ರತಿಪಾದನೆಗೆ ಸಾಮಾನ್ಯವಾಗಿ ಕಾವ್ಯ ಬಳಕೆಯಾಗುವುದು ರೂಢಿ, ಆದರೆ ಮೊದಲಿಗೆ ಗದ್ಯವನ್ನು ಬಳಸಿದ್ದು ಇವನ ಹೆಗ್ಗಳಿಕೆ. ಹೀಗಾಗಿಯೆ ಜೈನ ಧರ್ಮವು ಕನ್ನಡ ಸಾಹಿತ್ಯಕ್ಕೆ ಮೊದಲ ಗದ್ಯ ಕೃತಿಯನ್ನು ಕಾಣಿಕೆ ನೀಡಿರುವುದು ಬಹುಮುಖ್ಯ ಕೊಡುಗೆಯಾಗಿ ಪರಿಗಣಿಸಲಾಗಿದೆ. ಧರ್ಮದ ಜೊತೆಗೆ ಸಾಹಿತ್ಯದ ಹಲವು ಉತ್ಕೃಷ್ಟ ತಂತ್ರಗಳನ್ನು ಕಥೆಗಾರ ಅನುಸರಿಸಿದ್ದಾನೆ. ಜನಪದ ಸೊಗಡಿನ ಲಯ, ಕಥನ ಕೌಶಲದ ಕಲ್ಪನಾ ಶಕ್ತಿ ಮತ್ತು ಸೂಕ್ಷ್ಮ ನಿರೀಕ್ಷಣ ಶಕ್ತಿಯು ಈ ಗ್ರಂಥದಲ್ಲಿ ಪ್ರಜ್ವಲಿಸಿದೆ. ಒಟ್ಟಿನಲ್ಲಿ ಈ ಕೃತಿಯು ಜೈನರ ನೊಂಪಿ ಕಥೆಗಳ ಗುಚ್ಛವಾಗಿದೆ.

ಪಂಪನ ಕೃತಿ ರತ್ನಗಳು ಇಂದಿಗೂ ಮನುಷ್ಯನ ಬದುಕಿಗೆ ಕನ್ನಡಿ ಹಿಡಿಯುತ್ತವೆ. 'ಪಂಪಭಾರತ'ದ ತುಂಬೆಲ್ಲ ಆಶ್ರಯದಾತನಾದ ಚಾಲುಕ್ಯರ ಅರಿಕೇಸರಿಯೇ ಲೌಕಿಕ ನೆಲೆಯಲ್ಲಿ ವಿಜೃಂಭಿಸಿದರೂ, ಕರ್ಣನನ್ನು ನಮ್ಮ ಮುಂದಿಡುವ ಮೂಲಕ ವಾಸ್ತವತೆಯಲ್ಲಿ ಮನುಷ್ಯತ್ವವೇ ನಿಜವಾದ ಕುಲಧರ್ಮವೆಂದು ಸಾರಿದ್ದಾನೆ. ಆದರೆ 'ಆದಿಪುರಾಣ'ದಲ್ಲಿ ಧರ್ಮದೊಂದಿಗೆ ವಾಸ್ತವ ಜಗತ್ತನ್ನು ಸಮೀಕರಿಸಿ ಲೌಕಿಕ ಮತ್ತು ಅಲೌಕಿಕತೆಗಳನ್ನು ಸಮನ್ವಯಗೊಳಿಸಿದ್ದಾನೆ. ಜೈನಧರ್ಮವೇ ಈ ಕೃತಿಯಲ್ಲಿ ಹಾಸುಹೊಕ್ಕಾಗಿದೆ. ತೀರ್ಥಂಕರ ಕಥೆಯಲ್ಲಿ ಭೋಗದ ನಿಃಸ್ಸಾರತೆಯನ್ನು, ಚಕ್ರವರ್ತಿಯ ಕಥೆಯಲ್ಲಿ ಅಧಿಕಾರದ ತ್ಯಾಗವನ್ನು ವಿವರಿಸಿದ್ದಾನೆ. ಭೋಗ ಮತ್ತು ವೈಭವದ ನಿರಾಕರಣೆಗಳು ಜೈನಧರ್ಮದ ತಾತ್ವಿಕ ನೆಲೆಗಳು ಎಂಬುದು ಪಂಪನ ಕೃತಿಗಳ ಮೂಲಕ ತಿಳಿಯುತ್ತದೆ.

ರನ್ನ ಕವಿಯೂ ರತ್ನತ್ರಯರಲ್ಲೊಬ್ಬ. ಈತನ ಕೃತಿಗಳು 'ಗದಾಯುದ್ಧ' ಮತ್ತು 'ಅಜಿತನಾಥ ಪುರಾಣ'. 'ಗದಾಯುದ್ಧ'ವು ಲೌಕಿಕ ಕೃತಿಯಾದರೆ, 'ಅಜಿತನಾಥ ಪುರಾಣ'ವು ಅಲೌಕಿಕ ಕೃತಿ. ಎರಡನೇ ಕೃತಿಯಲ್ಲಿ ಜೈನಧರ್ಮವನ್ನೆ ಪ್ರಚಾರಪಡಿಸುವ ದೃಷ್ಟಿಯಿಂದ ಎರಡನೆ ತೀರ್ಥಂಕರ ಚರಿತ್ರೆಯೊಂದಿಗೆ ಜೈನಧರ್ಮದ ಏಳ್ಗೆಗೆ ಶ್ರಮಿಸಿದ ಅತ್ತಿಮಬ್ಬೆಯ ಗುಣಗಾನ ಮಾಡಿದ್ದಾನೆ. ಅವಳ ನೆನಪಿಗಾಗಿ ತನ್ನ ಮಗಳಿಗೆ ಹೆಸರಿಡುವ ಸಂದರ್ಭ ಗಮನಿಸಿದರೆ ಅತ್ತಿಮಬ್ಬೆಯ ಕಾರ್ಯ ವೈಖರಿಯನ್ನು ಅರಿಯಬಹುದು. ಜೊತೆಗೆ ಜೈನಮತದ ಆಶ್ರಯದಾತರಾದ ಗಂಗರ ನಾಲ್ಕನೇ ರಾಚಮಲ್ಲನ ಮಂತ್ರಿ ಚಾವುಂಡರಾಯನ ಆಶ್ರಯ ಪಡೆದು ಆ ಧರ್ಮದ ಪ್ರಚಾರಕ್ಕೆ ರನ್ನ ಕಂಕಣಬದ್ಧನಾಗಿದ್ದುದು ತಿಳಿಯುತ್ತದೆ. ಚಾವುಂಡರಾಯನ ಸಹಾಯ ಮತ್ತು ಪ್ರೋತ್ಸಾಹಕ್ಕೆ ಋಣಿಯಾಗಿ ರನ್ನ ತನ್ನ ಮಗನಿಗೆ 'ರಾಯ' ಎಂದು ಹೆಸರಿಟ್ಟ ಸಂದರ್ಭಗಳನ್ನು ಗಮನಿಸಿದರೆ ಧರ್ಮವು ಕೇವಲ ಆಧ್ಯಾತ್ಮಿಕ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗದೆ ಸರ್ವರ ಉದಯಕ್ಕೂ ಕಟಿಬದ್ಧವಾಗಿದ್ದುದನ್ನು ಕಾಣಬಹುದು.

ನಯಸೇನನ 'ಧರ್ಮಾಮೃತ'ವು ಧರ್ಮ ಮತ್ತು ಸಾಹಿತ್ಯದ ದೃಷ್ಟಿಯಿಂದ ಮಹತ್ವದ ಗ್ರಂಥ. ಪಾಂಡಿತ್ಯಮುಖಿಯಾಗಿದ್ದ ಚಂಪೂವನ್ನು ಸರಳಗೊಳಿಸಿ ತನ್ನ ಕೃತಿಯನ್ನು ಜನಸಾಮಾನ್ಯರ ಜೈನ ಪುರಾಣವಾಗಿಸಿದ ಕೀರ್ತಿ ನಯಸೇನನಿಗೆ ಸಲ್ಲುತ್ತದೆ. ಈತ ಪ್ರಾಚೀನ ಕನ್ನಡ ಪರಂಪರೆಯ ಜಾನಪದ ಕವಿ. ಜೈನಧರ್ಮವನ್ನು ಜನಸಾಮಾನ್ಯರಿಗೆ ತಿಳಿಸುವ ಉದ್ದೇಶದಿಂದ ಅನೇಕ ಉಪಕಥೆಗಳಲ್ಲಿ ಸಮಕಾಲೀನ ಸಮಾಜದಲ್ಲಿ ನಡೆಯುತ್ತಿದ್ದ ಹಲವು ಸಂದರ್ಭಗಳನ್ನು ತನ್ನ ಕೃತಿಯ ಮೂಲಕ

ಹಿಡಿದಿಟ್ಟಿದ್ದಾನೆ. ನಯಸೇನ ಮಾರ್ಗ ಪರಂಪರೆಯ ಕವಿ. ಆದರೆ ಅವನ ಕನ್ನಡದ ದೇಸಿ ಪರವಾದ ನಿಲುವು ಮೆಚ್ಚುವಂತಹದ್ದು. ಈ ಕೃತಿಯು ಪ್ರಧಾನವಾಗಿ ಕಥೆಗಳ ಗುಚ್ಛದಿಂದ ಕೂಡಿದೆ. ಧರ್ಮದ ಪ್ರತಿಪಾದನೆಯೊಂದಿಗೆ ಅಂದಿನ ಕಾಲದಲ್ಲಿ ಪ್ರಚಲಿತವಿದ್ದ ಜನಪದ ಕಥೆಗಳನ್ನು ಬಳಸಿಕೊಂಡು ಕನ್ನಡ ಜನತೆಯ ಮನಃಸ್ಥಿತಿಯನ್ನು ಸಹೃದಯರ ಮುಂದಿಡುತ್ತಾನೆ. ನಯಸೇನನು 'ಧರ್ಮಾಮೃತ'ವನ್ನು ಸ್ವಮತ ಪ್ರಚಾರಕ್ಕಾಗಿ ಬರೆದರೂ, ಈ ಕೃತಿ ಅನ್ಯಮತದ ದೂಷಣೆಯಿಂದ ಮುಕ್ತವಾಗಿಲ್ಲದಿರುವುದು ತಿಳಿಯುತ್ತದೆ.

ನಾಗಚಂದ್ರನು ಜೈನ ಮತಾವಂಬಿಯಾಗಿದ್ದು ತನ್ನೆರಡು ಕಾವ್ಯಗಳನ್ನು ಜೈನಧರ್ಮಕ್ಕೆ ಮೀಸಲಿಟ್ಟಿದ್ದಾನೆ. 'ಮಲ್ಲಿನಾಥ ಪುರಾಣ'ವು ಹತ್ತೊಂಭತ್ತನೇ ತೀರ್ಥಂಕರನಾದ ಮಲ್ಲಿನಾಥನ ಕುರಿತ ಜೈನ ಪುರಾಣ. ನಾಗಚಂದ್ರನ ಹೆಸರನ್ನು ಕನ್ನಡ ಸಾಹಿತ್ಯದಲ್ಲಿ ಶಾಶ್ವತಗೊಳಿಸಿದ್ದು 'ರಾಮಚಂದ್ರಚರಿತ ಪುರಾಣ'. ವೈದಿಕತೆಯ ರಾಮಾಯಣವನ್ನು ಜೈನಮತಕ್ಕೆ ಹೊಂದಿಕೊಂಡಂತೆ ರೂಪಿಸುವಲ್ಲಿ ಅಭಿನವ ಪಂಪನ ಸಾಹಿತ್ಯ ಕಾರ್ಯಕ್ಷಮತೆ ಮಿಗಿಲಾದುದು. ಪ್ರಾಕೃತ ಭಾಷೆಯಲ್ಲಿ ವಿಮಲಸೂರಿಯಿಂದ ರಚಿತಗೊಂಡ 'ಪಉಮಚರಿಯ'ಯನ್ನು ಧರ್ಮ ಮತ್ತು ಮಾನವಧರ್ಮ ಎರಡು ಸಂಮ್ಮಿಶ್ರಣಗೊಳ್ಳುವಂತೆ ನಿರ್ವಹಿಸಿದ್ದಾನೆ. ಈ ಕೃತಿಯಲ್ಲಿ ರಾವಣನ ಪಾತ್ರ ಚಿತ್ರಣ ಹೊಸಮುಂಬೆಳಕನ್ನು ಕಂಡಿದೆ. ರಾವಣ ನೈತಿಕತೆಯ ಸಾಕಾರಮೂರ್ತಿ ಎಂಬುದನ್ನು ಮೊದಲಿಗೆ ಕನ್ನಡ ಸಾಹಿತ್ಯದಲ್ಲಿ ದಾಖಲಿಸಿದ ಕೀರ್ತಿ ನಾಗಚಂದ್ರನದ್ದು. ತೀರ್ಥಂಕರ ಚರಿತ್ರೆಯಲ್ಲಿ ತನ್ನ ಕಾವ್ಯ ಸ್ವಾತಂತ್ರ್ಯಕ್ಕೆ ಅವಕಾಶವಿಲ್ಲದ್ದನ್ನು ಕಂಡಿದ್ದ ನಾಗಚಂದ್ರ ಈ ಕೃತಿಯಲ್ಲಿ ತನ್ನ ಪ್ರತಿಭಾವಂತಿಕೆಯನ್ನು ಮೆರೆದಿದ್ದಾನೆ. ಈತನ ಎರಡು ಕೃತಿಗಳು ಜೈನ ತತ್ವವನ್ನೇ ಸಾರಿದರೂ ಅವುಗಳಲ್ಲಿ ಅಡಕವಾದ ಮಾನವೀಯತೆ ದೊಡ್ಡದೆಂಬುದೆ ನನ್ನ ಭಾವನೆ.

ನೇಮಿಚಂದ್ರ ಜೈನಧರ್ಮವನ್ನು ಅವಲಂಬಿಸಿ 'ಲೀಲಾವತಿ ಪ್ರಬಂಧ', 'ನೇಮಿನಾಥ ಪುರಾಣ'ಕೃತಿ ರಚನೆ ಮಾಡಿದ್ದಾನೆ. 'ಲೀಲಾವತಿ ಪ್ರಬಂಧ'ವು ಲೌಕಿಕ ಕೃತಿಯಾಗಿದ್ದು ರಟ್ಟವಂಶದ ಲಕ್ಷ್ಮಣರಾಜ ಮತ್ತು ಅವನ ಮಡದಿ ಚಂಚಲಾದೇವಿಯರನ್ನು ಹೊಗಳುವುದರೊಂದಿಗೆ ಅಷ್ಟೇನು ಧರ್ಮದ ಪ್ರತಿಪಾದನೆ ಕಂಡುಬವುದಿಲ್ಲ. ಆದರೆ 'ನೇಮಿನಾಥ ಪುರಾಣ'ದಲ್ಲಿ ಇಪ್ಪತ್ತೆರಡನೇ ತೀರ್ಥಂಕರನ ಚರಿತ್ರೆಯನ್ನು ಚಿತ್ರಿಸಿದ್ದಾನೆ. ಇದು ಅಲೌಕಿಕ ಕೃತಿಯಾಗಿದ್ದು ಜನ್ನನಷ್ಟೆ ನಾನು ಧರ್ಮವನ್ನು ಪ್ರತಿಪಾದನೆ ಮಾಡಿದ್ದೇನೆ ಎಂದು ಆತ್ಮಪ್ರಂಶೆಸೆಯಿಂದ ಹೇಳಿಕೊಂಡಿದ್ದಾನೆ.

ಆಂಡಯ್ಯ ಜೈನಧರ್ಮವನ್ನು ಪ್ರತಿಪಾದಿಸಿದರೂ ಕನ್ನಡ ಭಾಷೆ ಮತ್ತು ಸಾಹಿತ್ಯದ ದೃಷ್ಟಿಯಿಂದ ಮಹತ್ವದ ಕವಿ. ಸಂಸ್ಕೃತದ ಸಹಾಯವಿಲ್ಲದೆ ಕನ್ನಡದಲ್ಲಿ ಕಾವ್ಯವನ್ನು ರಚಿಸುವುದು ಅಸಾಧ್ಯವೆಂದು ಭಾವಿಸಿದ ನಮ್ಮ ಕವಿ ಮಂಡಳಿಗೆ ತನ್ನ 'ಕಬ್ಬಿಗರ ಕಾವಂ' ಕೃತಿಯ ಮೂಲಕವೇ ಉತ್ತರ ನೀಡಿದ ಉಭಯ ಭಾಷಾ ಪಂಡಿತ. ಈ ಕೃತಿಯಲ್ಲಿ ಸಂಸ್ಕೃತ ಪದಗಳ ಮಿಶ್ರಣವಿಲ್ಲದೆ ದೇಶ್ಯ ಶಬ್ದಗಳಾದ ತದ್ಭವಗಳ ಮೂಲಕವೇ ಕಾವ್ಯ ರಚಿಸಿದ ಕನ್ನಡ ಭಾಷಾಪ್ರೇಮಿ. ತಾನು ನಂಬಿದ ಧರ್ಮದ ಧಾರ್ಮಿಕತೆಯನ್ನು ಪ್ರತಿಪಾದಿಸುವುದರೊಂದಿಗೆ ಅನ್ಯಧರ್ಮದ ವಸ್ತುವನ್ನೇ ಆಯ್ಕೆ ಮಾಡಿಕೊಂಡು, ಅನ್ಯ ಮತವನ್ನು ವಿಡಂಬಿಸದೆ ಜೈನಧರ್ಮವನ್ನು ಪ್ರತಿಪಾದಿಸಿದ ರೀತಿ ಅನುಕರಣೀಯವಾದುದು.

ಜೈನ ಮತ್ತು ವೈಷ್ಣವ ಧರ್ಮಗಳ ಸಂಮ್ಮಿಶ್ರಣದ ಹೊಯ್ಸಳರ ಎರಡನೇ ವೀರಬಲ್ಲಾಳನ ಆಶ್ರಯದಲ್ಲಿ ಕವಿಚಕ್ರವರ್ತಿ ಜನ್ನ ಜೀವಿಸಿದ್ದ. ಜನ್ನ ಹೆಸರಾಂತ ಜೈನಕವಿ. ತನ್ನೆರೆಡು ಕಾವ್ಯಗಳನ್ನು

ಅಲೌಕಿಕ ನೆಲೆಯಲ್ಲಿ ರಚಿಸಿದ್ದಾನೆ. ಜನ್ನನು 'ಅನಂತನಾಥ ಪುರಾಣ'ದಲ್ಲಿ ಹದಿನಾಲ್ಕನೇ ತೀರ್ಥಂಕರರ ಚರಿತ್ರೆಯ ಜೊತೆಗೆ ಚಂಡಶಾಸನ, ವಸುಷೇಣ, ಸುನಂದರ ಸಂಬಂಧದ ಮೂಲಕ ಭೋಗವನ್ನು ನಿರಾಕರಿಸುವ ದುರಂತ ಕ್ರಮಕ್ಕೆ ಒಂದು ವಿನ್ಯಾಸ ನೀಡಿದ್ದಾನೆ. ಕನ್ನಡ ವಿಮರ್ಶಕ ಸಹೃದಯ ಮನಸ್ಸನ್ನು ಅಂದಿನಿಂದ ಇಂದಿನವರೆಗೂ ಕಾಡುತ್ತಿರುವ ಪಾತ್ರ ಅಮೃತಮತಿ. ಜನ್ನ ತನ್ನ 'ಯಶೋಧರ ಚರಿತೆ'ಯಲ್ಲಿ ಅಮೃತಮತಿಯ ಮೂಲಕ ಧರ್ಮದ ನೆರಳಿನಲ್ಲಿಯೆ ಗಂಡು–ಹೆಣ್ಣಿನ ಮೂಲ ಪವೃತ್ತಿಗಳನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದ್ದಾನೆ. ಜನ್ನ ಈ ಕಾವ್ಯದಲ್ಲಿ ಧರ್ಮ, ಪ್ರಭುತ್ವ ಮತ್ತು ಪ್ರವೃತ್ತಿಗಳ ಸಹ ಸಂಬಂಧಗಳನ್ನು ಬದಗ, ಯಶೋಧರ ಮತ್ತು ಅಮೃತಮತಿಯ ಸಂಕೀರ್ಣ ಸಂಬಂಧಗಳ ಮೂಲಕ ಯಶಸ್ವಿಯಾಗಿ ಜೈನಧರ್ಮವನ್ನು ಪ್ರತಿಪಾದಿಸಿದ್ದಾನೆ. ಯಶೋಧರ ಚರಿತೆಯು ಯಾವ ತೀರ್ಥಂಕರ ಚರಿತ್ರೆಯನ್ನು ಒಳಗೊಳ್ಳದಿದ್ದರೂ, ನಾಲ್ಕು ಪುರಾಣಗಳಿಂದ ಆಗದ ಧರ್ಮ ಪ್ರಸಾರವನ್ನು ಇದೊಂದೆ ಕೃತಿ ಮಾಡಿದೆ. ಮೇಲಿನ ಮೊದಲಾದ ಜೈನಕವಿಗಳು ಧರ್ಮ ಪ್ರತಿಪಾದನೆಯೊಂದಿಗೆ ಮಾನವತೆಯನ್ನು ಜೊತೆಜೊತೆಯಾಗಿ ಪ್ರತಿಪಾದಿಸಿದ್ದಾರೆ.

ಧಾರ್ಮಿಕ ಸಾಹಿತ್ಯದಲ್ಲಿ ಜೈನ ಮತವು ಪ್ರಾಬಲ್ಯ ಮೆರೆದಿದೆ. ಧಾರ್ಮಿಕ ಪರಂಪರೆಯಲ್ಲಿ ಜೈನ ಕವಿಗಳ ಸಾಧನೆ ಉತ್ಕೃಷ್ಟವಾದುದು. ಈ ಧರ್ಮದ ನೆರಳಿನಲ್ಲಿ ಕಾಣಿಸಿಕೊಂಡ ತುಂಬಲೂರಾಚಾರ್ಯ (ಚೂಡಾಮಣಿ), ಶ್ಯಾಮಕುಂದಾಚಾರ್ಯ (ಕನ್ನಡ 'ಪ್ರಭೃತ'), ಸೈಗೊಟ್ಟ ಶಿವಮಾರ (ಗಜಾಷ್ಟಕ), ಶ್ರೀವಿಜಯ (ಕವಿರಾಜ ಮಾರ್ಗ), ಆಸಗ (ಕರ್ಣಾಟಕುಮಾರಸಂಭವಕಾವ್ಯಂ), ಗುಣನಂದಿ, ಗುಣವರ್ಮ, ಶಿವಕೋಟ್ಯಾಚಾರ್ಯ, ಪಂಪ, ಪೊನ್ನ, ಚಾವುಂಡರಾಯ, ರನ್ನ, ಶಾಂತಿನಾಥ (ಸುಕುಮಾರಚರಿತೆ), ನಾಗಚಂದ್ರ, ಕಂತಿ (ಕಂತಿಹಂಪನ ಸಮಸ್ಯೆಗಳು), ನಯಸೇನ, ಬ್ರಹ್ಮಶಿವ (ಸಮಯ ಪರೀಕ್ಷೆ), ಕರ್ಣಪಾಯ (ನೇಮಿನಾಥ ಪುರಾಣ), ಎರಡನೇ ನಾಗವರ್ಮ (ವರ್ಧಮಾನ ಪುರಾಣ), ಪಾರ್ಶ್ವನಾಥ ಪಂಡಿತ (ಪಾರ್ಶ್ವನಾಥ ಪುರಾಣ), ಜನ್ನ, ಆಂಡಯ್ಯ, ಕುಮುದೇಂದು (ಕುಮುದೇಂದು ರಾಮಾಯಣ) ಮೊದಲಾದ ಜೈನ ಕವಿಗಳು ಧರ್ಮದ ಪ್ರಭಾವದ ನೆರಳಿನಲ್ಲಿಯೆ ತಮ್ಮ ಸಾಹಿತ್ಯ ಸೇವೆ ಮಾಡಿದರು ಮತ್ತು ಅದರಲ್ಲಿಯೆ ತಮ್ಮ ಜೀವನವನ್ನು ಸವೆಸಿದರು. ಇಹಕ್ಕೊಂದು ಪರಕ್ಕೊಂದು ಕಾವ್ಯಗಳನ್ನು ನೆಲ–ಮುಗಿಲುಗಳು ಸಂಗಮಿಸುವಂತೆ ರಚನೆಗೈದಿದ್ದಾರೆ. ತಾವು ಹುಟ್ಟಿ–ಬೆಳೆದ ಮತ–ಧರ್ಮದ ಬಗ್ಗೆ ಅಪಾರ ಅಭಿಮಾನವನ್ನು ಜೈನಮತದ ಕವಿಗಳು ಹೊಂದಿದ್ದರು. ಇದಕ್ಕೆ ಕಾರಣ ಪಂಪನೇ ಸಾರಿ ಹೇಳುವಂತೆ ಎಲ್ಲಾ ಧರ್ಮಕ್ಕಿಂತಲೂ ಜೈನ ಧರ್ಮವೇ ಶ್ರೇಷ್ಠ ಎಂಬ ಅವನ ಮಾತು ಇದನ್ನು ಧೃಡೀಕರಿಸುತ್ತದೆ. ಜೈನ ಮತವಾಲಂಬಿ ಕೃತಿಗಳಾದ ಆದಿಪುರಾಣ, ವಡ್ಡಾರಾಧನೆ ಅಜಿತನಾಥ ಪುರಾಣ, ಶಾಂತಿನಾಥ ಪುರಾಣ, ಯಶೋಧರ ಚರಿತೆ, ಅನಂತನಾಥ ಪುರಾಣ, ಧರ್ಮಾಮೃತ, ಕಬ್ಬಿಗರ ಕಾವ, ನೇಮಿನಾಥ ಪುರಾಣ ಮೊದಲಾದ ಕಾವ್ಯಗಳು ಅಲೌಕಿಕತೆಯ ಮೂಲದ ಧಾರ್ಮಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ. ಒಟ್ಟಿನಲ್ಲಿ ಜೈನಕಾವ್ಯಗಳು ಯುಗಧರ್ಮವಾಗಿ ಮತ–ಧರ್ಮವನ್ನೇ ಪ್ರತಿಪಾದಿಸುತ್ತವೆ. ಹೀಗಾಗಿ ಮಾನವನ ಬದುಕಿನಲ್ಲಿ ಧರ್ಮವು ಪ್ರಮುಖ ಸ್ಥಾನವನ್ನು ಪಡೆದು ಮಾನವರ ಜೀವನವನ್ನು ಸುಮಧುರಗೊಳಿಸಲು ಪಣತೊಟ್ಟಂತೆ ಕಾಣುತ್ತದೆ. ಈ ನಿಯಮಕ್ಕೆ ಬೌದ್ಧ ಮತ್ತು ಜೈನ ಧರ್ಮಗಳು ಹೊರತಾಗಿಲ್ಲ. ಒಟ್ಟಿನಲ್ಲಿ ಧರ್ಮ ಮತ್ತು ಸಾಹಿತ್ಯವು ಜೊತೆಜೊತೆಯಾಗಿಯೆ ಪರಸ್ಪರ ಪೂರಕವಾಗಿ ಒಂದರ ಪ್ರಗತಿಗೆ ಮತ್ತೊಂದು ಬೆನ್ನೆಲುಬಾಗಿ ನಿಂತ ಸಾಕ್ಷ್ಯ ದೃಶ್ಯ ನಮ್ಮ ಮುಂದೆ ಇಂದಿಗೂ ಅನುರಣಿಸುತ್ತಿರುವುದು ವೇದ್ಯವಾಗುತ್ತದೆ.

**ಕೊನೆಟಿಪ್ಪಣಿಗಳು**

1. ಮುಗಳಿ ರಂ.ಶ್ರೀ.. *ಕನ್ನಡ ಸಾಹಿತ್ಯ ಚರಿತ್ರೆ.* ಪು.ಸಂ.55
2. ಬಸವರಾಜು ಎಲ್. (ಸಂ.) *ಬಸವಣ್ಣನವರ ವಚನಗಳು.* ಪು.ಸಂ.76
3. ಶಿವರುದ್ರಪ್ಪ ಜಿ. ಎಸ್. *ಕನ್ನಡ ಸಾಹಿತ್ಯ ಸಮೀಕ್ಷೆ.* ಪು.ಸಂ. 33–34.
4. ಶಿವರಾಮ ಕಾರಂತ. ಕೆ. ಬಾಳ್ವೆಯೇ ಬೆಳಕು. ಪು.ಸಂ.19
5. ಶ್ರೀಕಂಠಯ್ಯ ಬಿ.ಎಂ. ಕನ್ನಡ ಕೈಪಿಡಿ. ಸಂಪುಟ–2. ಪು.ಸಂ. 468

**ಪರಾಮರ್ಶನ ಗ್ರಂಥಗಳು**


- ಬಸವರಾಜು ಎಲ್. (ಸಂ.) (1952). *ಬಸವಣ್ಣನವರ ವಚನಗಳು.* ಗೀತಾ ಬುಕ್‌ಹೌಸ್.
- ಮುಗಳಿ ರಂ.ಶ್ರೀ. (2006). *ಕನ್ನಡ ಸಾಹಿತ್ಯ ಚರಿತ್ರೆ.* ಕನ್ನಡ ಸಾಹಿತ್ಯ ಪರಿಷತ್.
- ಶಿವರಾಮ ಕಾರಂತ. ಕೆ. (2013). ಬಾಳ್ವೆಯೇ ಬೆಳಕು. ಸಪ್ನ ಬುಕ್‌ಹೌಸ್.
- ಶಿವರುದ್ರಪ್ಪ ಜಿ. ಎಸ್. (2016). *ಕನ್ನಡ ಸಾಹಿತ್ಯ ಸಮೀಕ್ಷೆ.* ಸಪ್ನ ಬುಕ್‌ಹೌಸ್.
- ಶ್ರೀಕಂಠಯ್ಯ ಬಿ.ಎಂ. ಕನ್ನಡ ಕೈಪಿಡಿ. ಸಂಪುಟ–2.